**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09**

ಸಂಖ್ಯೆ: ಸಿಎಸಿ-4/ಬಿ.ಇಡಿ.ದಾ-01/2020-21 ದಿನಾಂಕ: 04-03-2021

# ಜ್ಞಾಪನ

ವಿಷಯ: 2020-21 ನೇ ಸಾಲಿನ ಬಿ.ಇಡಿ ದಾಖಲಾತಿ ಪ್ರಕ್ರಿಯೆ ನಿರ್ವಹಿಸುವ ಕುರಿತು.

2020-21ನೇ ಸಾಲಿನ ಬಿ.ಇಡಿ ಕೋರ್ಸಿಗೆ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡುವ ಸಂಬಂಧ ಕಾಲೇಜು ಸಹಿತ ಹಂಚಿಕೆಯ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 04-03-2021ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ ಹಾಗೂ ತಮಗೆ ಇ-ಮೇಲ್ ಮೂಲಕ ಕಳುಹಿಸಿದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ದಾಖಲಾತಿ ಪತ್ರ ವಿತರಿಸುವ ಸಂದರ್ಭದಲ್ಲಿ ಕೆಳಕಂಡ ಅಂಶಗಳನ್ನು ತಪ್ಪದೇ ಗಮನಿಸುವುದು.

- ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಹಂಚಿಕೆಯಾದ ಕಾಲೇಜಿಗೆ ಶುಲ್ಕ ಪಾವತಿಸಿ ದಾಖಲಾತಿ ಪಡೆಯಲು ದಿನಾಂಕ: 05-03-2021ರಿಂದ 10-03-2021ರವರೆಗೆ ಮಾತ್ರ ಅವಕಾಶವಿರುತ್ತದೆ.

- ದಾಖಲಾತಿ ಶುಲ್ಕವನ್ನು ಆನ್ ಲೈನ್ ಮೂಲಕ **(ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಯು.ಪಿ.ಐ ಮೂಲಕವೇ ಪಾವತಿಸತಕ್ಕದ್ದು)** ಮಾತ್ರ ಪಾವತಿಸಲು ಅವಕಾಶವಿದೆ.

- ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಪರಿಶೀಲನಾ ವೇಳೆಯಲ್ಲಿ ಒದಗಿಸಿದ ಮೂಲ ದಾಖಲೆಗಳನ್ನು ನಮೂನೆ-6ರಂತೆ ಕ್ರಮವಾಗಿ ಜೋಡಿಸಿಕೊಂಡು ನೋಡಲ್ ಕೇಂದ್ರಗಳಿಗೆ ಹಾಜರಾಗುವರು. ಪರಿಶೀಲನಾ ವೇಳೆಯಲ್ಲಿ ಒದಗಿಸಿದಂತೆ ಮೂಲ ದಾಖಲೆಗಳು ಸರಿಯಾಗಿವೆಯೇ ಹಾಗೂ ನಿಗದಿತ ಶುಲ್ಕ ಪಾವತಿಸಿರುವುದನ್ನು ಖಾತ್ರಿಪಡಿಸಿಕೊಂಡು, ದಾಖಲಾತಿ ಪತ್ರ ವಿತರಿಸುವುದು. ನಂತರ ಮೂಲ ದಾಖಲೆಗಳನ್ನು ಅಭ್ಯರ್ಥಿಗಳಿಗೆ ಹಿಂದಿರುಗಿಸಿ ಕಾಲೇಜಿಗೆ ನಿಗದಿತ ದಿನಾಂಕದೊಳಗೆ ದಾಖಲು ಮಾಡಿಕೊಳ್ಳಲು ತಿಳಿಸುವುದು.

**ಸೂಚನೆ: ಶುಲ್ಕ ವಿನಾಯಿತಿ ಬಯಸುವ ಪ.ಜಾತಿ/ ಪ.ಪಂಗಡ ಕ್ಕೆ ಸೇರಿದ ಅಭ್ಯರ್ಥಿಗಳು ಸಂಬಂಧಿಸಿದ ಆದಾಯ ಪ್ರಮಾಣ ಪತ್ರ ಸಲ್ಲಿಸಿದಲ್ಲಿ ಸಂಬಂಧಪಟ್ಟ ಅಂಕಣದಲ್ಲಿ Yes ಎಂದು ನಮೂದಿಸಿದರೆ**

**ದಾಖಲಾತಿ ಪತ್ರ generate ಆಗುತ್ತದೆ. ಒಂದೊಮ್ಮೆ ಒದಗಿಸದೇ ಇದ್ದಲ್ಲಿ ಅವರು ಶುಲ್ಕ ಪಾವತಿಸಿದ ನಂತರ ದಾಖಲಾತಿ ಪತ್ರ generate ಆಗುತ್ತದೆ. ಆದಾಯ ಮಿತಿ ರೂ. 2,50,000/- ಗಳಿಗಿಂತ ಅಧಿಕವಿರುವ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸುವುದು ಕಡ್ಡಾಯ. ಈ ಬಗ್ಗೆ ಖಚಿತಪಡಿಸಿಕೊಂಡ ನಂತರ ದಾಖಲಾತಿ ಪತ್ರ ನೀಡುವುದು.**

- ದಾಖಲಾತಿ ಪತ್ರ ವಿತರಿಸಿದ ನಂತರ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿಗೆ ದಾಖಲು ಮಾಡಿಕೊಂಡಿರುವ ಬಗ್ಗೆ ಮಾಹಿತಿಯನ್ನು ಕಾಲಕಾಲಕ್ಕೆ ಸ್ವೀಕರಿಸಲು ಸಿ.ಎ.ಸಿ ಯಿಂದ ಆನ್ ಲೈನ್ ನಮೂನೆಯನ್ನು ಡಯಟ್/ ಸಿ.ಟಿ.ಇ ಗಳಿಗೆ ಕಳುಹಿಸಲಾಗುವುದು. ಆಯಾ ಡಯಟ್/ ಸಿ.ಟಿ.ಇ ವ್ಯಾಪ್ತಿಯ ಕಾಲೇಜುಗಳಿಗೆ ಆನ್ ಲೈನ್ ನಮೂನೆಯಲ್ಲಿ ಮಾಹಿತಿ ನಮೂದಿಸುವ ಬಗ್ಗೆ ತಿಳಿಸುವುದು. ಈ ಕುರಿತು ಸಂಬಂಧಪಟ್ಟ ಕಾಲೇಜಿಗೆ Login ID ಮತ್ತು Password ಅನ್ನು ನೀಡಲಾಗುವುದು. ಆಯಾ ಕಾಲೇಜಿನ ಸಂಕೇತವು (Institution Code) Login ID ಆಗಿರುತ್ತದೆ (ಉದಾ: ಸಿ.ಟಿ.ಇ ಕಲಬುರಗಿಯ ಸಂಕೇತ 33005 ಇದು ಸಿ.ಟಿ.ಇ ಕಲಬುರಗಿಯ Login ID ಆಗಿರುತ್ತದೆ). Password ಅನ್ನು ಸಂಬಂಧಪಟ್ಟ ಕಾಲೇಜಿನವರು reset ಮಾಡಿಕೊಳ್ಳಬೇಕಾಗುತ್ತದೆ. ಈ ಮಾಹಿತಿಯನ್ನು ತಮ್ಮ ವ್ಯಾಪ್ತಿಯ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ ತಪ್ಪದೇ ನೀಡುವುದು.

- ದಾಖಲಾತಿ ಪತ್ರ ಪಡೆದ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ದಿನಾಂಕ: 10-03-2021ರ ಒಳಗೆ ದಾಖಲು ಮಾಡಿಕೊಳ್ಳುವರು. ನಿಗದಿತ ದಿನಾಂಕದ ನಂತರ ದಾಖಲಾತಿ ಪತ್ರ ವಿತರಿಸಲು ಅವಕಾಶವಿರುವುದಿಲ್ಲ.
- ನಿಗದಿತ ಶುಲ್ಕ ಪಾವತಿಸಿ ದಾಖಲಾತಿ ಪತ್ರ ಪಡೆದು ಸಂಬಂಧಪಟ್ಟ ಕಾಲೇಜುಗಳಿಗೆ ನಿಗದಿತ ದಿನಾಂಕದೊಳಗೆ ದಾಖಲು ಮಾಡಿಕೊಳ್ಳದೇ ನಿರಾಕರಿಸುವ ಅಭ್ಯರ್ಥಿಗಳನ್ನು ಮುಂದಿನ ದಾಖಲಾತಿ ಪ್ರಕ್ರಿಯೆಗಳಿಗೆ ಪರಿಗಣಿಸಲಾಗುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳಿಗೆ ತಿಳುವಳಿಕೆ ನೀಡುವುದು.

- ಸಂಬಂಧಪಟ್ಟ ಕಾಲೇಜಿನವರು Login ಆಗಿ, ಅಭ್ಯರ್ಥಿಗಳು ಕಾಲೇಜಿಗೆ ದಾಖಲು ಮಾಡಿಕೊಂಡಿರುವ ಬಗ್ಗೆ ಆನ್ ಲೈನ್ ನಮೂನೆಯಲ್ಲಿ Reported ಎಂದು ನಮೂದಿಸುವುದು.

ಇದಕ್ಕೂ ಮೊದಲು ಕಾಲೇಜಿನ ಹೆಸರು, ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ, ಕಾಲೇಜಿನ ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್ ವಿಳಾಸವನ್ನು ನಮೂನೆಯಲ್ಲಿ ನಮೂದಿಸುವುದು. ಈ ಬಗ್ಗೆ ಅಗತ್ಯ ಮಾಹಿತಿಯನ್ನು ತಮ್ಮ ವ್ಯಾಪ್ತಿಯ ಕಾಲೇಜುಗಳಿಗೆ ತಪ್ಪದೇ ನೀಡುವುದು.

- ತಮ್ಮ ವ್ಯಾಪ್ತಿಯ ಬಿ.ಇಡಿ ಕಾಲೇಜುಗಳಲ್ಲಿ ಅಭ್ಯರ್ಥಿಗಳು ದಾಖಲು ಮಾಡಿಕೊಂಡಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಅನುಪಾಲನೆ ಮಾಡಲು ಪ್ರಾಂಶುಪಾಲರ ದೂರವಾಣಿ ಸಂಖ್ಯೆಯನ್ನು ಕೆಳಕಂಡ ನಮೂನೆಯಲ್ಲಿ ತಮ್ಮ ಕಛೇರಿಯಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುವುದು. ಸದರಿ ಪಟ್ಟಿಯನ್ನು ಸಿ.ಎ.ಸಿ ಗೆ ಸಲ್ಲಿಸುವುದು.

| ಕಾಲೇಜಿನ ಹೆಸರು | ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ | ಕಾಲೇಜಿನ ದೂರವಾಣಿ ಸಂಖ್ಯೆ | ಇ-ಮೇಲ್ ವಿಳಾಸ |
|---|---|---|---|
| | | | |

- ಮೇಲ್ಕಂಡ ವಿವರಗಳಂತೆ ಅಭ್ಯರ್ಥಿಗಳು ಕಾಲೇಜಿನಲ್ಲಿ ದಾಖಲು ಮಾಡಿಕೊಂಡಿರುವ ಬಗ್ಗೆ ಅನುಪಾಲನೆ ಮಾಡುವುದು. ಈ ಬಗ್ಗೆ ಕಂಟ್ರೋಲ್ ಶೀಟನ್ನು ನಿರ್ವಹಿಸಿ ಕೊನೆಯ ದಿನಾಂಕದಂದು ಸಿ.ಎ.ಸಿಗೆ ಸಲ್ಲಿಸುವುದು.

- ಆಯ್ಕೆಯಾಗಿರುವ ಅಭ್ಯರ್ಥಿಗಳು ದಾಖಲಾತಿ ಪಡೆಯಲು ಹಾಗೂ ಕಾಲೇಜಿಗೆ ದಾಖಲು ಮಾಡಿಕೊಳ್ಳಲು ಕಡಿಮೆ ಕಾಲಾವಧಿ ಇದ್ದು, ಅಭ್ಯರ್ಥಿಗಳ ಹಿತದೃಷ್ಟಿಯಿಂದ ಕಛೇರಿ ಅವಧಿಯ ನಂತರವೂ ಕರ್ತವ್ಯ ನಿರ್ವಹಿಸಿ ಸಹಕರಿಸುವುದು ಹಾಗೂ ತಾಳ್ಮೆಯಿಂದ ಅಭ್ಯರ್ಥಿಗಳಿಗೆ ದಾಖಲಾಗಲು ಅನುವು ಮಾಡಿಕೊಡಲು ಕೋರಿದೆ.

- ಕಾಲೇಜುಗಳಲ್ಲಿ ದಾಖಲಾತಿಯನ್ನು ಸುಗಮವಾಗಿ ಹಾಗೂ ಕಾಲಮಿತಿಯಲ್ಲಿ ನಡೆಸುವ ನಿಟ್ಟಿನಲ್ಲಿ ಮೇಲ್ಕಂಡ ಅಂಶಗಳ ಬಗ್ಗೆ ಆಯಾ ನೋಡಲ್ ಕೇಂದ್ರದ ವ್ಯಾಪ್ತಿಯ ಬಿ.ಇಡಿ

ಕಾಲೇಜು ಪ್ರಾಂಶಪಾಲರುಗಳಿಗೆ ತಿಳಿಸುವುದು ನೋಡಲ್ ಅಧಿಕಾರಿಗಳು ಜವಾಬ್ದಾರಿಯಾಗಿರುತ್ತದೆ.

- ಇದರೊಂದಿಗೆ ತಮ್ಮ ನೋಡಲ್ ಕೇಂದ್ರ ವ್ಯಾಪ್ತಿಗೆ ಸಂಬಂಧಿಸಿದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಇ-ಮೇಲ್ ಮೂಲಕ ಕಳುಹಿಸಲಾಗುವುದು. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ವಿವರಗಳ ಮುಂದೆ Admitted/ Not Admitted ನಮೂದಿಸಿ ಅಂತಿಮ ದಿನಾಂಕದ ನಂತರ ಒಂದು ಪ್ರತಿಯನ್ನು ತಮ್ಮಲ್ಲಿ ಇರಿಸಿಕೊಂಡು ಇನ್ನೊಂದು ಪ್ರತಿಯನ್ನು ಸಿ.ಎ.ಸಿಗೆ ಸಲ್ಲಿಸುವುದು.

ಸಹಿ/-

ವಿಶೇಷಾಧಿಕಾರಿ

ಪ್ರತಿಯನ್ನು:

1. ರಾಜ್ಯದ ಎಲ್ಲಾ ಡಯಟ್/ ಸಿ.ಟಿ.ಇ ಪ್ರಾಂಶುಪಾಲರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸಂಬಂಧಪಟ್ಟ ನೋಡಲ್ ಅಧಿಕಾರಿಗಳಿಗೆ.

## ANNEXURE – 06

**Proforma for submitting original Marks cards and other original documents in respect of candidates selected in selection list with allotment and who wish to get admitted to the allotted institution for admission to B.Ed Course during 2020-21**

1) Name of the Candidate :

2) Name of the Father. :

3) Postal address in full with pin code. :

4) Nodal Centre No :

5) Application No :

6)

| Sl. No. | Particulars of original Documents Submitted | Number |
|---|---|---|
| A | S.S.L.C./ X Std. Marks Card. | |
| B | II P.U.C./ XII Std. Marks Card. | |
| C | I, II and III Year Degree / P.G. Degree Marks Cards. | |
| D | 7 Years Study Certificate / 7 Years Domicile Certificate/ Kannada Medium Study Certificate from I to X Std. | |
| E | University Migration Certificate | |
| F | Caste cum Income Certificate | |
| G | Special Group Certificate: (D.P./Ex-M.P./G.K./H.K./N.C.C/N.S.S./SPO) | |
| H | PH Certificate issued by District Medical Board of concerned District | |
| I | Hyderabad Karnataka candidates have to produce Domicile Certificate compulsorily | |
| | Enclose documents for Sl.No. E, F, G, H & I only if applicable. | |
| | TOTAL NO. OF ORIGINAL DOCUMENTS SUBMITTED | |

Signature of the Candidate

Attestation by the Head of the Nodal Centre

Place:

Date: Signature of the Head of the Nodal Centre
with Seal